ಕುಡಿಯುವ ನೀರಿನ ವ್ಯವಸ್ಥೆ

18(537), ಶ್ರೀ ಡಾ॥ ಉಮೇಶ್ ಜಿ.ಜಾಧವ್ (ಚಿಂಚೋಳಿ)

ಅ) ಗುಲಬರ್ಗಾ ಜಿಲ್ಲೆಯ ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಗ್ರಾಮಗಳಲ್ಲಿ ಬೇಸಿಗೆ ಕಾಲದಲ್ಲಿ ಪ್ರತಿವರ್ಷ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಪ್ರಸ್ತುತ ವರ್ಷ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗ್ರತೆಯಾಗಿ ಕೈಗೊಂಡ ಕ್ರಮಗಳೇನು (ವಿವರ ನೀಡುವುದು);

ಇ) ಗುಲಬರ್ಗಾ ಜಿಲ್ಲೆಯಲ್ಲಿ ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡು ಕ್ರಮಗಳೇನು?

ಶ್ರೀ ಟಿ.ಬಿ.ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಶ್ರೀ ಹೆಚ್.ಕೆ. ಪಾಟೀಲ್ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

ಅ) ಚಿಂಚೋಳಿ ಕ್ಷೇತ್ರದ ಕೆಲವು ಜನವಸತಿಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆಯುಂಟಾಗುತ್ತಿದೆ.

ಆ) 2014-15ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (NRDWP) ಕ್ರಿಯಾ ಯೋಜನೆಯಡಿ ಚಿಂಚೋಳಿ ಮತಕ್ಷೇತ್ರಕ್ಕೆ ₹ 3927.87 ಲಕ್ಷ ಅಂದಾಜು ಮೊತ್ತದ ಒಟ್ಟು 281 ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಸರ್ಕಾರದ ದಿ:20.10.2014ರ ಆದೇಶದಲ್ಲಿ ಬರಪೀಡಿತ ಚಿಂಚೋಳಿ ತಾಲ್ಲೂಕಿಗೆ ₹ 200.00 ಲಕ್ಷ ಅನುದಾನ ಒದಗಿಸಲಾಗಿದೆ. ಸದರಿ

ಅನುದಾನದ ಕ್ರಿಯಾ ಯೋಜನೆಯು ಅನುಮೋದನೆಯಾಗಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಕೆಳಕಂಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಸಲುವಾಗಿನ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ.

1) ಗಡಿಲಿಂಗದಳ್ಳಿ ಹಾಗೂ ಇತರೆ 4 ಗ್ರಾಮಗಳ ಅಂದಾಜು ಮೊತ್ತ ₹ 400.00 ಲಕ್ಷಗಳು.

2) ಪಸ್ತಪೂರ ಹಾಗೂ ಇತರೆ 8 ಗ್ರಾಮಗಳ ಅಂದಾಜು ಮೊತ್ತ ₹ 540.00 ಲಕ್ಷಗಳು.

ಈ) ಚಿಂಚೋಳಿ ಮತಕ್ಷೇತ್ರದಲ್ಲಿ ಈಗಾಗಲೇ ಮೇಲೆ ವಿವರಿಸಿರುವ ಬಹುಗ್ರಾಮ ಯೋಜನೆಗಳಲ್ಲದೆ, ಚಿಂಚೋಳಿ ತಾಲ್ಲೂಕಿನ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವವಿರುವೆಡೆ ಬಹುಗ್ರಾಮ ಯೋಜನೆಗಳನ್ನು ರೂಪಿಸಲಾಗಿದ್ದು, ರಾಜ್ಯ ತಾಂತ್ರಿಕ (STA) ಸಂಸ್ಥೆ ಮುಂದೆ ಪರಿಶೀಲನೆಯಲ್ಲಿದೆ.

ಡಾ: ಉಮೇಶ್ ಜಿ.ಜಾಧವ್: ಉತ್ತರವನ್ನು ಒದಗಿಸಿದ್ದಾರೆ. ಆದರೆ ಇದು MVS, Multi Village Water Supply Scheme, State Technical Agency ಯಲ್ಲಿ ಪೆಂಡಿಂಗ್ ಇದೆ. ಹಾಗಾಗಿ ಅದನ್ನು ಆದಷ್ಟು ಬೇಗ Technical Committee ಯಲ್ಲಿ clear ಮಾಡಬೇಕೆಂದು ಹೇಳಿ ನಾನು ಆಗ್ರಹಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೂ ಕೂಡ ಉತ್ತರವನ್ನು ಕೊಟ್ಟಿದ್ದೇನೆ. ಅದರಲ್ಲಿ ಬಹಳ

ಮುಖ್ಯವಾಗಿ State Technical Committee ಮುಂದೆ ಇರತಕ್ಕಂತಹ ವಿಚಾರದಲ್ಲಿ ಪೂರಕವಾಗಿ ಅದಕ್ಕೆ ಬೇಕಾಗಿರುವಂತಹ ಅಂದಾಜು ವೆಚ್ಚವೆಂದರೆ 320 ಕೋಟಿ ರೂಪಾಯಿಗಳು, 320 ಕೋಟಿ ರೂಪಾಯಿಗಳ ವಿಚಾರದಲ್ಲಿ ಈಗಾಗಲೇ ಆರ್ಥಿಕವಾಗಿ, ತಾಂತ್ರಿಕವಾಗಿ ಕಾರ್ಯಸಿಂಧು ಯೋಜನೆಗಳನ್ನು ತೆಗೆದುಕೊಳ್ಳಬೇಕಾದಾಗ ಹೇಗೆ ಮಾಡಬೇಕು ಎನ್ನುವುದಿದೆ. ಅದಕ್ಕೆ ಚಿಂಚೋಳಿ ತಾಲ್ಲೂಕಿಗೆ ಶಾಶ್ವತ ಪರಿಹಾರವನ್ನು ಕಾಣಬೇಕಾದಾಗ ಇದು ಪೂರಕ ಮತ್ತು ಅಗತ್ಯ ಎನ್ನುವುದನ್ನು ಸರ್ಕಾರ ಮನಗಂಡಿದೆ. ಅದಕ್ಕೆ ಪೂರಕವಾಗಿರುವಂತಹ ರೀತಿಯಲ್ಲಿ ಚಿಂತನೆಯನ್ನು ಮಾಡುತ್ತದೆ.

ಡಾ: ಉಮೇಶ್ ಜಿ.ಜಾಧವ್: ನಮ್ಮ ಹತ್ತಿರ surface water ಬಹಳಷ್ಟು ಇದೆ. ಚಿಂಚೋಳಿ ಅತಿ ಹಿಂದುಳಿದ ಕ್ಷೇತ್ರವಾಗಿದೆ. ನೀರಿನ ಸಮಸ್ಯೆ ಬಹಳಷ್ಟಿದೆ. ಆದಷ್ಟು ಬೇಗ ಕ್ಲಿಯರ್ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಆದಷ್ಟು ಬೇಗ ಸರ್ಕಾರ ಇದರ ಕಡೆಗೆ ಗಮನ ಕೊಡುತ್ತದೆ.

ಅಧ್ಯಕ್ಷರು: ಶ್ರೀಮಾನ್ ವಿಶ್ವನಾಥ್ ಈ. ಪಾಟೀಲ್‌ರವರು ಪ್ರಶ್ನೆ ಕೇಳಿ.

"ನಮ್ಮ ಹೊಲ – ನಮ್ಮ ದಾರಿ" ಯೋಜನೆ

19(538), ಶ್ರೀ ವಿಶ್ವನಾಥ್ ಈ. ಪಾಟೀಲ್ (ಬೈಲಹೊಂಗಲ)

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಬೆಳಗಾವಿ ಜಿಲ್ಲೆಯ ರೈತರ ಕೃಷಿ ಭೂಮಿಗೆ ಸಂಪರ್ಕ ಕಲ್ಪಿಸುವ "ನಮ್ಮ ಹೊಲ–ನಮ್ಮ ದಾರಿ" ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳೆಷ್ಟು; ಸದರಿ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಗೆ ಮೀಸಲಿಟ್ಟ ಹಾಗೂ ಬಳಕೆಯಾದ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);